**1 ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು**

ಸ್ಪೆಷಲ್ ಮೊಕದ್ದಮೆ ನಂಃ **94/2021**

| | | |
|---|---|---|
| ಸಾಕ್ಷಿದಾರರ ಹೆಸರು | - ಮನೋಜ್ | ಪಿಡಬ್ಲ್ಯೂ- 02 |
| ತಂದೆಯ ಹೆಸರು | - ಚಂದ್ರಶೇಖರ್ | ಸಿಡಬ್ಲ್ಯೂ -07 |
| ವಯಸ್ಸು | - 26 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ಚಿಕ್ಕಮಗಳೂರು | |

ದಿನಾಂಕಃ 17-02-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು. ಫ್ರಾಸಾ.1 ನನ್ನ ತಂದೆ. ಚಾಸಾ.6 ನನ್ನ ತಾಯಿ. ಚಾಸಾ.8 ಮತ್ತು 9 ರವರು ಗೊತ್ತು, ಅವರು ನಮ್ಮ ಅಕ್ಕಪಕ್ಕದ ಮನೆಯವರು. ನಾನು ಪರಿಶಿಷ್ಟ ಜಾತಿಯ ಆದಿಕರ್ನಾಟಕ ಜನಾಂಗಕ್ಕೆ ಸೇರಿದವನು. ಆರೋಪಿ ಲಿಂಗಾಯಿತ ಜನಾಂಗಕ್ಕೆ ಸೇರಿದವನು.

2. ಉಂಡೇದಾಸರಹಳ್ಳಿಯಲ್ಲಿ ನಾನು ನಮ್ಮ ಕುಟುಂಬದವರೊಂದಿಗೆ ವಾಸವಾಗಿದ್ದೇನೆ. ನಮ್ಮ ಮನೆಯ ಪಕ್ಕದಲ್ಲಿ ಆರೋಪಿ ವಾಸವಾಗಿದ್ದನು. ಈಗ್ಗೆ 5 ವರ್ಷಗಳ ಹಿಂದೆ ಒಂದು ದಿನ ರಾತ್ರಿ 8.30 ಗಂಟೆ ಸಮಯದಲ್ಲಿ ಯಾರೋ ನಮ್ಮ ಮತ್ತು ಆರೋಪಿಯ ಮನೆಯ ನಡುವೆ ಇರುವ ಓಣಿಯಲ್ಲಿ ಬೈಕನ್ನು ನಿಲ್ಲಿಸಿದ್ದರು. ಅದನ್ನು ನೋಡಿದ ಆರೋಪಿ ನನ್ನ ತಾಯಿಯಾದ ಚಾಸಾ.6 ರವರನ್ನು ಕುರಿತು ನಮ್ಮ ಮನೆಯ ಓಣಿಯಲ್ಲಿ ಬೈಕನ್ನು ಯಾಕೆ ನಿಲ್ಲಿಸಿದ್ದೀರಾ

ಎಂದು ಕೇಳಿ ಜಗಳ ಮಾಡಿದನು. ಅದೇ ಸಮಯದಲ್ಲಿ ಸಂತೆಯಿಂದ ಅಲ್ಲಿಗೆ ಬಂದ ನನ್ನ ತಂದೆಯಾದ ಫ್ರಾಸಾ.1 ರವರನ್ನು ಕುರಿತು ಆರೋಪಿ, ಹೊಲೆಯ ಸೂಳೆಮಕ್ಕಳಾ, ನಮ್ಮ ಜಾಗದಲ್ಲಿ ಬೈಕನ್ನು ನಿಲ್ಲಿಸುತ್ತೀರಾ ಎಂದು ಬೈದು  ನಿನ್ನನ್ನು ಕಡಿಯುತ್ತೇನೆ ಎಂದು ಹೇಳಿ ತನ್ನ ಮನೆಯೊಳಗೆ ಹೋಗಿ ಒಂದು ಕತ್ತಿಯನ್ನು ತಂದು ನನ್ನ ತಂದೆಗೆ ಕಡಿಯಲು ಕತ್ತಿಯನ್ನು ಬೀಸಿದನು. ಅದೇ ಸಮಯಕ್ಕೆ ನನ್ನ ತಂದೆ ಮನೆಯೊಳಗೆ  ಹೋದ ಕಾರಣ ಕತ್ತಿಯ ಪೆಟ್ಟು ನಮ್ಮ ಮನೆಯ ಬಾಗಿಲಿಗೆ ಬಿತ್ತು. ಆಗ ಅಲ್ಲೇ ಇದ್ದ ಚಾಸಾ.8 ಫ್ರಾನ್ಸಿಸ್, ಚಾಸಾ.9 ಈರಯ್ಯರವರು ಯಾಕೆ ಗಲಾಟೆ ಮಾಡುತ್ತಿದ್ದೀಯಾ ಎಂದು ಆರೋಪಿಗೆ ಬೈದರು. ಆಗ ಆರೋಪಿ ಕತ್ತಿಯನ್ನು ತೆಗೆದುಕೊಂಡು ಅಲ್ಲಿಂದ ಓಡಿ ಹೋದನು.

3. ನಂತರ ಆ ಬಗ್ಗೆ ಫ್ರಾಸಾ.1 ರವರು ಆರೋಪಿಯ ವಿರುದ್ಧ ಚಿಕ್ಕಮಗಳೂರು  ನಗರ ಪೊಲೀಸರಿಗೆ ದೂರನ್ನು ಕೊಟ್ಟರು. ನಂತರ ಪೊಲೀಸರು ನನ್ನನ್ನು ವಿಚಾರಿಸಿದರು, ಆಗ ನಾನು ಅವರಿಗೆ ಮೇಲೆ ಹೇಳಿದ ವಿಚಾರಗಳನ್ನು ತಿಳಿಸಿ ಹೇಳಿಕೆ ಕೊಟ್ಟೆನು.

4. ಆರೋಪಿ ಫ್ರಾಸಾ.1 ರವರ ಮೇಲೆ ಹಲ್ಲೆ ಮಾಡಲು ಬಳಸಿದ್ದ ಕತ್ತಿಯನ್ನು ನೋಡಿದರೆ ಗುರುತಿಸುತ್ತೇನೆ.  ಸಾಕ್ಷಿಯು ಮರದ ಹಿಡಿಯಿರುವ ಒಂದು ಕಬ್ಬಿಣದ ಕತ್ತಿಯನ್ನು ನೋಡಿ ಆರೋಪಿ ಫ್ರಾಸಾ.1 ರವರ ಮೇಲೆ ಬೀಸಿದ ಕತ್ತಿ  ಅದೇ ಎಂದು ಗುರುತಿಸಿರುತ್ತಾರೆ. ಸದರಿ ಕಬ್ಬಿಣದ ಕತ್ತಿಯನ್ನು  ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲು:**

**(ಪಾಟೀ ಸವಾಲು: ಆರೋಪಿ ಪರ ವಕೀಲರು ಬಿ.ಎನ್.ಎಸ್.ಎಸ್. ಕಲಂ 254(3) ರಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಿರುವ**

ಆದೇಶದಂತೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ